# ದೈವೀ ಸಂಪತ್ತು

ನಮ್ಮ ಪ್ರಾಚೀನ ಪುರಾಣ ಹಾಗೂ ಕಾವ್ಯಗಳಲ್ಲಿ ‘ಸಮುದ್ರ ಮಥನ’ದ ಪ್ರಸಂಗ ಬರುವುದುಂಟಷ್ಟೆ. ಆ ‘ಸಮುದ್ರ ಮಥನ’ದಲ್ಲಿ ದೇವತೆಗಳೂ ರಾಕ್ಷಸರೂ ವಾಸುಕಿಯನ್ನು ಹಗ್ಗವನ್ನಾಗಿ ಮಾಡಿಕೊಂಡು ಸಮುದ್ರವನ್ನು ಕಡೆದರೆಂಬ ಅದ್ಭುತ ಕಥೆ ಬರುತ್ತದೆ. ವಾಸುಕಿಯ ಬಾಲವನ್ನು ದೇವತೆಗಳೂ ತಲೆಯನ್ನು ರಾಕ್ಷಸರೂ ಹಿಡಿದು ನಿಂತರು. ಸಮುದ್ರಮಥನವನ್ನು ಮಾಡಿದರು. ಮಥನದ ಕಾರಣದಿಂದ ಅಮೂಲ್ಯ ವಸ್ತುಗಳು ಬಂದುವು. ಅಲ್ಲಿ ವಿಷ ಬಂತು. ಅಮೃತವೂ ಬಂತು. ಶಿವನು ವಿಷ ಕುಡಿದು ವಿಷಕಂಠನಾದ. ಸಮುದ್ರ ಮಥನದ ಕತೆಯಲ್ಲಿ ಒಂದು ಕಡೆ ಆಸುರೀನೆಲೆ ಇದೆ; ಇನ್ನೊಂದು ಕಡೆ ದೈವೀನೆಲೆ ಇದೆ! ನಾವು ಯಾವುದನ್ನು ಬಯಸುತ್ತೇವೆಯೋ ಅದನ್ನು ಪಡೆಯುತ್ತೇವೆ. ರಾಕ್ಷಸ ಮತ್ತು ದೇವತೆಗಳು ಇಲ್ಲಿ ಸಂಕೇತಗಳು ಮಾತ್ರ. ದುಷ್ಟತನಕ್ಕೆ ರಾಕ್ಷಸರು ಸಂಕೇತವಾದರೆ; ಶಿಷ್ಟತನಕ್ಕೆ ದೇವತೆಗಳು ಸಂಕೇತವಾಗುತ್ತಾರೆ! ನಮ್ಮ ಭಾಷೆಯಲ್ಲವೂ ಸಂಕೇತಗಳಿಂದಲೇ ಕೂಡಿದೆ. ಇದು ಭಾಷೆಗಿರುವ ಆತ್ಯಂತಿಕ ಶಕ್ತಿ.

ಭಗವದ್ಗೀತೆಯಲ್ಲಿ ‘ದೇವಾಸುರ ಸಂಪದ್ವಿಭಾಗಯೋಗ’ ಎಂಬ ಅಧ್ಯಾಯವೊಂದು ಬರುತ್ತದೆ. ಇದರಲ್ಲಿ ಬರುವ ಸಂಗತಿಯನ್ನು ಸರಳವಾಗಿ ಹೀಗೆ ಸಂಗ್ರಹಿಸಬಹುದು: ‘ನಮ್ಮನ್ನು ಆಳುತ್ತಿರುವುದು ಯಾವುದು? ನಮ್ಮನ್ನು ನಿಯಂತ್ರಿಸುತ್ತಿರುವ ಶಕ್ತಿ ಯಾವುದು?’ ಈ ಪ್ರಶ್ನೆಗಳಿಗೆ ‘ಸ್ವಭಾವವೇ ನಮ್ಮನ್ನು ನಿಯಂತ್ರಿಸುತ್ತಿದೆ.’ ಇದು ಸತ್ಯ. ಅದರಲ್ಲೂ ಸ್ವಭಾವ ಎರಡು ಬಗೆಯಾಗಿದೆ. ಒಂದು ದೈವೀಸಂಪತ್ತು, ಮತ್ತೊಂದು ಆಸುರೀ ಸಂಪತ್ತು. ದೈವೀ ಸಂಪತ್ತು ನಮ್ಮನ್ನು ಉನ್ನತಿಯ ನೆಲೆಗೆ ಕರೆದೊಯ್ಯುತ್ತಿದ್ದರೆ; ಆಸುರೀ ಸಂಪತ್ತು, ಸಂಸಾರ ಬಂಧನದ ಕಡೆ ಕರೆದೊಯ್ಯುತ್ತದೆ. ನಮ್ಮಲ್ಲಿ ಅಂತಃಕರಣ ಶುದ್ಧಿ, ದಾನ, ತಪ, ದಮ, ಅಹಿಂಸೆ, ಸತ್ಯ, ಅಕ್ರೋಧ, ಮೃದುತ್ವ, ಕ್ಷಮೆ, ಧೈರ್ಯ ಇವುಗಳುಂಟು. ಇವುಗಳಿಂದಾಗಿ ದೈವೀಗುಣ ಇರುವವನು ಉನ್ನತಿಯ ಕಡೆಗೆ ಚಲಿಸುತ್ತಾನೆ. ಪೂರ್ವಿಕರು ಇದನ್ನು ‘ಮೋಕ್ಷ’ ಎಂದು ಕರೆದರು. ಮೇಲೆ ಹೇಳಿದ ದೈವೀಗುಣಗಳಿಗೆ ವಿರುದ್ಧವಾದುದು ಯಾವುದುಂಟೋ ಅದೆಲ್ಲವೂ ಆಸುರೀ ಗುಣದ ಸ್ವಭಾವಗಳು. ಇಂಥವರಲ್ಲಿ ವಿಚಾರಶಕ್ತಿ ಕಡಿಮೆ, ಸತ್ಯವನ್ನು ನಂಬುವುದಿಲ್ಲ. ಕಾಮವೇ ಪರಮಪುರುಷಾರ್ಥವೆಂದು ತಿಳಿಯುತ್ತಾರೆ. ಸದಾ ಧನಪಿಶಾಚಿಗಳೇ ಆಗಿರುತ್ತಾರೆ. ಸ್ವಲ್ಪ ಸಿಕ್ಕರೆ ಇನ್ನಷ್ಟು ಸಿಗಬೇಕೆಂದು ಹಂಬಲಿಸುತ್ತಾರೆ. ತಾವೇ ಬಲಶಾಲಿ ಎಂದು ಬೀಗುತ್ತಾರೆ; ವಿಧವಿಧವಾಗಿ ಮೆರೆಯುತ್ತಾರೆ. ಇಂಥವನಿಗೆ ಸದಾ ಭೋಗದ ಚಿಂತೆಯೇ. ಅಹಂಕಾರ, ಬಲ, ದರ್ಪ, ಕಾಮ, ಕ್ರೋಧಗಳಿಂದ ಸದಾ ವಿಜೃಂಭಿಸುತ್ತಿರುತ್ತಾರೆ. ಕಾಮ–ಕ್ರೋಧ–ಲೋಭ, ಇವು ಮೂರು ಆಸುರ ಸ್ವಭಾವದವರ ಸಂಪತ್ತು. ದೈವೀಸ್ವಭಾವದವರು ಪೂರ್ತಿಯಾಗಿ ಈ ಮೂರನ್ನು ತ್ಯಜಿಸಿತ್ತಾರೆ. ಅವರು ಸದಾ ದೈವೀಸಂಪತ್ತನ್ನು ಗಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶ್ರೀಕೃಷ್ಣ ಅರ್ಜುನನಿಗೆ ಹೇಳುವುದಿಷ್ಟು: ‘ನೀನು ದೈವೀಸಂಪತ್ತಿಗೆ ಆಕರನಾಗಿದ್ದೀಯೆ. ದೈವೀಗುಣ, ದೈವೀ ಸ್ವಭಾವ ನಿನ್ನದು’. ಇವಿಷ್ಟು ಈ ಅಧ್ಯಾಯದ ಸಾರಾಂಶ.

ಗೀತೆಯ ಹಿನ್ನೆಲೆಯಲ್ಲಿ ನಾವು ಇದನ್ನು ತುಸು ಯೋಚಿಸೋಣ. ನಮ್ಮ ಬದುಕು ಸುಖಮಯ ಎಂದು ಭಾವಿಸಿದ್ದೇವೆ. ಆದರೆ, ಆಧುನಿಕತೆ ನಮ್ಮನ್ನು ಬಲವಾಗಿ ಕಟ್ಟಿಹಾಕಿದೆ. ನಮ್ಮ ಮುಂದೆ ಬೇಕೆಂಬ ರಾಶಿಯೇ ಬಿದ್ದಿದೆ. ಕೊಳ್ಳುವುದಕ್ಕಂತೂ ಮಿತಿಯಿಲ್ಲ. ಆಸೆಗಳ ಬೆನ್ನನ್ನು ಹತ್ತಿದರೆ ಮನುಷ್ಯ ವಿಪತ್‌ಪರಂಪರೆಗೆ ಹೋದಂತೆಯೇ ಸರಿ. ಅಲ್ಲಿ ಅವನು ದುಃಖದ ಬಲೆಗೆ ಬೀಳುತ್ತಾನೆ. ಮೊದಲು ಇಷ್ಟು ಸಿಕ್ಕಿದರೆ ಸಾಕೆಂದು ಮನಸ್ಸು ಹೇಳುತ್ತದೆ. ಅನಂತರ ಇನ್ನಷ್ಟು, ಮತ್ತಷ್ಟು ಬೇಕೆಂಬ ಒತ್ತಡ. ಇದೇ ಸ್ವಭಾವ. ಮಹಾಭಾರತವು ದುರ್ಯೋಧನನ ವಿಷಯದಲ್ಲಿ ‘ಸ್ವಭಾವೋ ದುರತಿಕ್ರಮಃ’ ಎಂದು ಹೇಳಿದೆ. ನಮ್ಮ ನಮ್ಮ ಸ್ವಭಾವಗಳು ನಮ್ಮನ್ನು ನಿಯಂತ್ರಿಸುತ್ತಿರುತ್ತವೆ. ಭತ್ತದ ಗದ್ದೆಗೆ ಒಡ್ಡು ಹಾಕಿ ನಿಲ್ಲಿಸಿದರೆ, ಭತ್ತದ ತೆನೆ ಬರುತ್ತದೆ. ಬಂದ ನೀರು ಬಂದಂತೆ ಹರಿದುಹೋದರೆ, ಭತ್ತದ ತೆನೆಯಿಲ್ಲದೆ ಜೊಂಡು ಬೆಳೆಯುತ್ತದೆ. ಈ ಸಾಮತಿಯನ್ನು ನಾವು ಸಾವಧಾನವಾಗಿ ಪರಿಶೀಲಿಸಿದರೆ, ‘ಸ್ವಭಾವ’ದ ಮೂಲಕ ನಮ್ಮ ನಮ್ಮ ಬದುಕು ನಿಯಂತ್ರಣಕ್ಕೆ ಒಳಪಟ್ಟಿದೆಯೆಂಬುದು ನಿಶ್ಚಿತವಾಗುತ್ತದೆ.

ನಮ್ಮ ಭಾರತೀಯ ಸಾಹಿತ್ಯದಲ್ಲಿ ಕಾಮ–ಕ್ರೋಧ–ಲೋಭಗಳ ಕಥನ ಪ್ರಪಂಚವನ್ನೇ ನಾವು ಕಾಣುತ್ತೇವೆ. ಕಾಮ – ಎಂದರೆ ಸದಾ ಹಂಬಲಿಸುವುದು. ಈ ಹಂಬಲದ ಪರಿಣಾಮ ಕ್ರೋಧ, ಕಾಮಕ್ರೋಧಗಳ ಸಂಯುಕ್ತ ಘಟಕವೇ ಲೋಭ. ಇವು ಒಂದರೊಡನೊಂದನ್ನು ಆಕ್ರಮಿಸಿಕೊಂಡಿವೆ. ಇವು ಒಂದನ್ನು ಬಿಟ್ಟು ಒಂದು ಇರಲಾರವು! ಮನುಷ್ಯ ಒಮ್ಮೆ ‘ಕಾಮ’ಕ್ಕೆ ವಶನಾದರೆ, ಅದರಿಂದ ಹಿಂತಿರುಗಿ ಬರುವುದು ಕಡುಕಷ್ಟ. ಇದಕ್ಕೆ ಮಹಾಭಾರತದ ದುರ್ಯೋಧನಾದಿ ಅವನ ತಮ್ಮಂದಿರು, ರಾಮಾಯಣದಲ್ಲಿ ರಾವಣ ಮತ್ತು ಅವನ ರಾಕ್ಷಸ ಸಮೂಹ, ಇವರೇ ಉದಾಹರಣೆಗಳಾಗುತ್ತಾರೆ. ನಾವು ಇವುಗಳ ಸ್ವಭಾವದಲ್ಲೇ ಬದುಕಿದರೆ ಅವುಗಳಿಂದ ಮುಕ್ತಿಯಿಲ್ಲ! ಸತ್ಯ–ಅಸತ್ಯ, ಧರ್ಮ–ಅಧರ್ಮ, ಕಾಮ–ಅಕಾಮ, ಬೇಕು–ಬೇಡ, ಇಂಥ ವಿರುದ್ಧಾರ್ಥಕ ನೆಲೆಯ ತಾಕಲಾಟದಲ್ಲೇ ಸದಾ ನಾವು ಇರಬೇಕಾಗುತ್ತದೆ. ದೈವೀಗುಣದ ಕಡೆ ಒಲಿದವನು ‘ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧು–ಬಳಗ’ ಎನ್ನುತ್ತಾ ಮುನ್ನಡೆಯುತ್ತಾನೆ. ಅಸತ್ಯದ ದಾರಿ ಹಿಡಿದವನು, ಕತ್ತಲೆಯ ಕೂಪಕ್ಕೆ ಬೀಳುತ್ತಾನೆ. ವೇದವು ‘ಅಂಧೇನೇವ ನೀಯ ಮಾನಾಃ ಯಥಾ ಅಂಧಾಃ’ – ಏಳಿಗೆಗೆ ನಾವೇ ಕಾರಣರು ಎನ್ನುತ್ತದೆ. ಧರ್ಮದ ನೆಲೆಯನ್ನು ಹಿಡಿದವನು ಅಧರ್ಮದ ಕಡೆ ತಲೆಯೆತ್ತಿ ನೋಡುವುದಿಲ್ಲ. ಅದು ಅವನ ಸ್ವಭಾವವೂ ಅಲ್ಲ.

ಭಾರತೀಯ ಸಾಹಿತ್ಯದ ಶ್ರೀರಾಮ, ಶ್ರೀಕೃಷ್ಣ ಮತ್ತು ಪರಮಶಿವ ಈ ಮೂವರೂ ಸತ್ಯ, ಧರ್ಮ, ಅಕಾಮದ ದಾರಿಯನ್ನು ಹಿಡಿದು ನಡೆದವರು. ಇದು ಸಂಸ್ಕೃತಿಯ ಹೆದ್ದಾರಿ. ನಮ್ಮದು ದೊಡ್ಡ ನಡಿಗೆಯಾದಾಗ ದೈವೀಗುಣವು ಮತ್ತಷ್ಟು ನಮ್ಮಲ್ಲಿ ಹೆಚ್ಚಾಗುತ್ತದೆ. ಆದರೆ, ನಮ್ಮ ಸುತ್ತಮುತ್ತಣ ಪರಿಸರ ಕಾಮ–ಲೋಭಗಳ ನಡುವೆ ಸಿಕ್ಕಿಹಾಕಿಕೊಂಡಿದೆ. ಇದರಿಂದ ಹೊರಬರಲಾರದ ಸಂಕಟ ನಮ್ಮದಾಗಿದೆ. ಈ ಸಂಕಟದಿಂದ ಬಿಡುಗಡೆ ಪಡೆಯಬೇಕಾದರೆ, ನಮ್ಮ ಮೂಲ ಸ್ವಭಾವದಲ್ಲೇ ಪರಿವರ್ತನೆ ಕಾಣಬೇಕು.

■ **ಪುರಂಜೀವಿ**

## ಮಾತೇ ಮುತ್ತು

- ಧರ್ಮ ಎನ್ನುವುದು ಲೋಕದ ಹಿತಕ್ಕಾಗಿಯೇ ಹೊರತು; ಲೋಕ ಧರ್ಮದ ಹಿತಕ್ಕಾಗಿ ಅಲ್ಲ.
  —ಡಿ.ವಿ.ಜಿ.
- ಜಾತಿಯನ್ನು ಕೇಳಬೇಡಿ , ಹೇಳಬೇಡಿ ಮತ್ತು ಅದರ ಬಗ್ಗೆ ಚಿಂತಿಸಲೂ ಬೇಡಿ.
  —ನಾರಾಯಣ ಗುರು
- ಒಂದು ಮಾತಿನಲ್ಲಿ ಹೇಳುವುದಾದರೆ, ವೇದಾಂತದ ಆದರ್ಶವೇ, ಮಾನವನ ನೈಜಸ್ಥಿತಿಯನ್ನು ಅರಿಯುವುದು. ನಿನ್ನ ಕಣ್ಣೆದುರಿಗೆ ಇರುವ ದೇವರ ವ್ಯಕ್ತರೂಪವಾದ ಸಹಮಾನವನನ್ನೇ ಪೂಜಿಸಲು ಆಗದೆ ಇದ್ದರೆ, ಅವ್ಯಕ್ತನಾದ ದೇವರನ್ನು ನೀನು ಹೇಗೆ ಪೂಜಿಸಬಲ್ಲೆ ಎಂಬುದೇ ವೇದಾಂತದ ಸಂದೇಶ.
  —ಸ್ವಾಮಿ ವಿವೇಕಾನಂದ
- ನನ್ನ ಮಟ್ಟಿಗಂತೂ ಆತ್ಮಗೌರವವನ್ನು ಬಿಟ್ಟು ಉಳಿಸಿಕೊಳ್ಳಬೇಕಾದ ಯಾವ ಕಲೆಯೂ ಪ್ರಪಂಚದಲ್ಲಿ ಇಲ್ಲ.
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ತಾಳಿ ತಾಳಿ ಎನ್ನುವುದೇ ಮಂತ್ರ; ತಾಳ್ಮೆ ಇಲ್ಲದಿರೆ ಬಾಳೇ ಅತಂತ್ರ.
  —ಪು.ತಿ.ನ.
- ನಿಜವಾದ ವಿದ್ಯೆ, ಮನುಷ್ಯನಿಗೆ ಆಲೋಚಿಸುವುದನ್ನು ಕಲಿಸುತ್ತದೆ.
  —ಹಾ.ಮಾ.ನಾಯಕ
- ಸಂಪ್ರದಾಯದ ಬಾವಿಯಲ್ಲಿ ತೇಲುವುದು ಒಳ್ಳೆಯದು. ಅದರಲ್ಲಿ ಮುಳುಗುವುದು ಆತ್ಮಹತ್ಯೆ.
  —ಗಾಂಧೀಜಿ